**ದಿನಾಂಕ 11.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ: ಶ್ರೀ.ಡಿ.ಎಸ್.ಪಿ. ವಕೀಲರಿಂದಃ-**

ನನಗೆ ಓದಲು-ಬರೆಯಲು ಬರುವುದಿಲ್ಲ. ನ್ಯಾಯಾಲಯಕ್ಕೆ ನಾನು ಯಾವ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ನನ್ನ ವಕೀಲರಿಂದ ತಿಳಿದಿರುತ್ತದೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲಾತಿಗಳ ನನಗೆ ಬಗ್ಗೆ ತಿಳಿದಿರುತ್ತದೆ. ಅಸಲು ದಾವಾ ಸಂ.31/2004 ರ ದಾವೆಯಲ್ಲಿ ತೀರ್ಪುಗೊಂಡಿದ್ದು, ಸದರಿ ತೀರ್ಪಿನ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ನನಗೆ ಓದಲು-ಬರೆಯಲು ಬರುವುದಿಲ್ಲ. ಅಸಲು ದಾವಾ ಸಂ.31/2004 ರ ದಾವೆಯಲ್ಲಿ ಏನು ತೀರ್ಪುಗೊಂಡಿರುತ್ತದೆ ಎಂದು ನಾನು ನನ್ನ ವಕೀಲರ ಬಳಿ ಕೇಳಿ ತಿಳಿದುಕೊಂಡಿರುವುದಿಲ್ಲ. ಅಸಲು ದಾವಾ ಸಂ.240/2015 ರ ದಾವೆಯಲ್ಲಿ ಏನು ತೀರ್ಪುಗೊಂಡಿರುತ್ತದೆ ಎಂದು ನನಗೆ ಗೊತ್ತಿಲ್ಲ. ತರೀಕೆರೆ ಉಪ-ವಿಭಾಗಾಧಿಕಾರಿಗಳ ನ್ಯಾಯಾಲಯದ ಆರ್.ಎ. ನಂ.85/2002-03 ರ ಪ್ರಕರಣದಲ್ಲಿ ಏನು ಆದೇಶವಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ.

ವಾದಿ ಅಕ್ಕಮ್ಮನವರು ನನ್ನ ಚಿಕ್ಕಮ್ಮನಾಗಬೇಕು. ದಾವಾ ಆಸ್ತಿಯ ಸರ್ವೆ ನಂ.215 ಆಗಿರುತ್ತದೆ. ಸರ್ವೆ ನಂ.215 ರಲ್ಲಿ ನಾನು ಮತ್ತು ವಾದಿಯರು ಸ್ವಾಧೀನದಲ್ಲಿ ಇರುತ್ತೇವೆ. ಅಳತೆ ಮಾಡಲು ಬಂದಿದ್ದ ಸರ್ವೆಯವರು ಏನು ವರದಿ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ದಾವೆಯು ದಾವಾ ಆಸ್ತಿಯಲ್ಲಿ ಹೆಚ್ಚು ಕಡಿಮೆ ಆಗಿರುತ್ತದೆ ಎಂದು ನಡೆಯುತ್ತಿರುತ್ತದೆ. ಸರ್ವೆ ನಂ.215 ರಲ್ಲಿ ಒಟ್ಟು 2 ಎಕರೆ ಜಮೀನು ಇರುತ್ತದೆ. ಸರ್ವೆ ನಂ.239/2 ರಲ್ಲಿ ನಾನು ಮತ್ತು ವಾದಿ ಅರ್ಧ-ಅರ್ಧ ಭಾಗದಲ್ಲಿ ಸ್ವಾಧೀನದಲ್ಲಿರುತ್ತೇವೆ. ಸರ್ವೆ ನಂ.239/2 ಸಹ ನಮ್ಮ ಕುಟುಂಬದ ಸ್ವತ್ತಾಗಿರುತ್ತದೆ. ಸರ್ವೆ ನಂ.239/1 ರಲ್ಲಿ ನಾನು ಮತ್ತು ವಾದಿಗಳು ಸ್ವಾಧೀನದಲ್ಲಿರುತ್ತೇವೆ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದಃನ್ಯಾ.ದಂ.,ರವರು ಕಡೂರು.